ಇ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರವು ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮವೇನು?

ಶ್ರೀ ಎಸ್ ರಮೇಶ್ (ಯುವಜನ ಸೇವಾ, ಕ್ರೀಡಾ ಮತ್ತು ಕನ್ನಡ ಹಾಗೂ ಸಂಸ್ಕೃತಿ ಸಚಿವರು):-

ಅ ವಿವರ ಈ ಕೆಳಗಿನಂತಿದೆ

		ಅಧಿಕಾರಿಗಳು	ನೌಕರರು
1.	ಯುಸೇಕ್ರಿ ನಿರ್ದೇಶನಾಲಯದಲ್ಲಿ	3	108
2.	ಎನ್.ಸಿ.ಸಿ ನಿರ್ದೇಶನಾಲಯದಲ್ಲಿ	1	96

ಆ ಈ ಕೆಳಗಿನ ಕಾರಣಗಳಿಂದ ಸದರಿ ನೌಕರರ ಸೇವೆಯನ್ನು ಮುಂದುವರಿಸಲಾಗಿದೆ.

1. ಜಿಲ್ಲಾ ಮತ್ತು ವಿಭಾಗ ಮಟ್ಟದಲ್ಲಿ ಸಾಕಾಗುವಷ್ಟು ಹುದ್ದೆಗಳು ಇಲ್ಲದಿರುವುದು.
2. ತಾಲ್ಲೂಕು ಕೇಂದ್ರಗಳಲ್ಲಿ ಮಂಜೂರಾದ ಹುದ್ದೆಗಳು ಇಲ್ಲದಿರುವುದು.
3. ಗ್ರೂಪ್ ಡಿ, ಹುದ್ದೆಗಳನ್ನು ಜಿಲ್ಲೆಯಿಂದ ಜಿಲ್ಲೆಗೆ ವರ್ಗಾಯಿಸುವ ನಿಯಮದಲ್ಲಿ ಅವಕಾಶ ಇಲ್ಲದಿರುವುದು.
4. ಕೆಲವು ನೌಕರರ ಪತಿ ,ಪತ್ನಿ ಇಬ್ಬರೂ ಒಂದೇ ಸ್ಥಳದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವುದು.

ಇ ಸರ್ಕಾರದ ಕೆಲಸ ಕಾರ್ಯಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮಾರ್ಗದರ್ಶನದಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಸಾರ್ವಜನಿಕ ಸೇವೆಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪುರಸ್ಕಾರಗಳು.

(1387) ಶ್ರೀ ಎಚ್.ವಿಶ್ವನಾಥ್ (ಕೆ.ಆರ್.ನಗರ):- ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಅತ್ಯುತ್ತಮ ಸಾರ್ವಜನಿಕ ಸೇವೆಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಯಾವ ವರ್ಷದಿಂದ ಪುರಸ್ಕಾರ ಮತ್ತು ಪದವಿಗಳನ್ನು ನೀಡಿ ಗೌರವಿಸುತ್ತಿದೆ.

ಆ ಕಳೆದ ಐದು ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಪುರಸ್ಕಾರ ಮತ್ತು ಪದವಿ ಪಡೆದುಕೊಂಡಿರುವ ಇಲಾಖೆಯ ವ್ಯಕ್ತಿಗಳ ಹೆಸರುಗಳಾವುವು (ಪ್ರತಿಯೊಂದು ವರ್ಷದ ವಿವರ ಒದಗಿಸುವುದು)

ಇ ರಾಜ್ಯ ಮತ್ತು ಕೇಂದ್ರ ಸರ್ಕಾರದ ಈ ಸೇವಾ ಪುರಸ್ಕಾರ ಪದವಿ ಪಡೆಯಲು ಕನಿಷ್ಟ ಮಾನದಂಡವೇನಾದರೂ ಸರ್ಕಾರ ರೂಪಿಸಿಕೊಂಡಿದೆಯೆ.

ಈ ಹಾಗಿದ್ದಲ್ಲಿ ಅದಕ್ಕೆ ಹೊಂದಿರಬೇಕಾದ ಅರ್ಹತೆಗಳೇನು.

ಉ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸೇವಾ ಪ್ರಶಸ್ತಿ ಪಟ್ಟಿಗೆ ಸೇರ್ಪಡೆಯಾಗುವಲ್ಲಿ ಹಿಂದುಳಿದ ಅಲ್ಪಸಂಖ್ಯಾತ ಮತ್ತು ದಲಿತ ವರ್ಗಗಳಿಗೆ ಸೇರಿರುವ ಕೆಲವು ವ್ಯಕ್ತಿಗಳಿಗೆ ಪ್ರತಿ ವರ್ಷವೂ ತಾರತಮ್ಯ ತೋರಲಾಗುತ್ತಿರುವುದು ನಿಜವಲ್ಲವೇ.

ಊ ಹಾಗಿದ್ದಲ್ಲಿ ಅದಕ್ಕೆ ಹೊಣೆಗಾರರಾಗಿರುವ ಅಧಿಕಾರಿಗಳ ಮೇಲೆ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳುವುದೆ ?

ಶ್ರೀ ಎಸ್.ರಮೇಶ್ (ಯುವಜನ ಸೇವಾ, ಕ್ರೀಡೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ ಸಾರ್ವಜನಿಕ ಸೇವೆಗಾಗಿ ಕೇಂದ್ರ ಸರ್ಕಾರವು ಪ್ರಶಸ್ತಿಗಳನ್ನು ಅಂದರೆ"ಭಾರತ ರತ್ನ", "ಪದ್ಮವಿಭೂಷಣ", "ಪದ್ಮಭೂಷಣ", "ಪದ್ಮಶ್ರೀ", ಪ್ರಶಸ್ತಿಗಳನ್ನು1954 ರಿಂದ ನೀಡುತ್ತಾ ಬರುತ್ತಿದೆ. ಹಾಗೂ ರಾಜ್ಯ ಸರ್ಕಾರವು 1966 ರಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ.

ಆ ಹಿಂದಿನ 5 ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಪುರಸ್ಕಾರ ಪಡೆದ ಇಲಾಖಾ ವ್ಯಕ್ತಿಗಳ ವಿವರಗಳನ್ನು ಅನುಬಂಧಗಳು-1 ಮತ್ತು 2 ರಲ್ಲಿ ನೀಡಲಾಗಿದೆ.

ಇ ಹೌದು.

ಈ ಆಯಾಯ ಕ್ಷೇತ್ರಗಳಲ್ಲಿ ಸಾಧಿಸಿರುವ ಸಾಧನೆ ಹಾಗೂ ಪ್ರಶಸ್ತಿಯ ಪರಿಶೀಲನೆಗಾಗಿ ಗೊತ್ತುಪಡಿಸಿರುವ ಮಾರ್ಗಸೂಚಿಗಳೇ ಅರ್ಹತೆಗಳು.

ಉ ನಿಜವಲ್ಲ.

ಊ ಉದ್ಭವಿಸುವುದಿಲ್ಲ.

ಅನುಬಂಧ-1

ಕೇಂದ್ರ ಪ್ರಶಸ್ತಿ ವಿಜೇತ ಸರ್ಕಾರಿ ಅಧಿಕಾರಿಗಳು

ಕ್ರ.ಸಂ.	ಪ್ರಶಸ್ತಿ ಮತ್ತು ಪಡೆದ ವರ್ಷ	ಹೆಸರು	ಕ್ಷೇತ್ರ	ಕೆಲಸ ಮಾಡುತ್ತಿರುವ: ಮಾಡುತ್ತಿದ್ದ ಇಲಾಖೆ
1	ಪದ್ಮಭೂಷಣ 1987	ಡಾ.ರೋಡಾಮ್ ನರಸಿಂಹ	ವೈಜ್ಞಾನಿಕ ತಾಂತ್ರಿಕ	ನಿರ್ದೇಶಕರು, ರಾಷ್ಟ್ರೀಯ ವೈಮಾನಿಕ ಪ್ರತಿಷ್ಠಾನ
2	ಪದ್ಮಶ್ರೀ 1987	ಡಾ.ದೇವಿ ಪ್ರಸನ್ನ ಪಟ್ಟಾನಾಯಕ್	ಭಾಷಾ ಅಧ್ಯಯನ	ನಿರ್ದೇಶಕರು, ಕೇಂದ್ರ ಭಾಷಾ ಅಧ್ಯಯನ ಸಂಸ್ಥೆ, ಮೈಸೂರು.
3	ಪದ್ಮಶ್ರೀ 1987	ಡಾ.ರಾಮದಾಸ.ಟಿ ಶೆಣೈ	ವೈಜ್ಞಾನಿಕ ತಾಂತ್ರಿಕ	ನಿರ್ದೇಶಕರು, ಎಲೆಕ್ಟ್ರಾನಿಕ್ಸ್, ಸಂಶೋಧನೆ ಮತ್ತು ಪ್ರತಿಷ್ಠಾನ.
4	ಪದ್ಮಶ್ರೀ 1990	ಡಾ.ಎಂ.ಕೃಷ್ಣ ಭಾರ್ಗವ	ವೈದ್ಯಕೀಯ	ಕಿದ್ವಾಯಿ ಆಸ್ಪತ್ರೆ

ಅನುಬಂಧ-2

ರಾಜ್ಯ ಪ್ರಶಸ್ತಿ ವಿಜೇತ ಸರ್ಕಾರಿ ಅಧಿಕಾರಿಗಳು

	ಕ್ಷೇತ್ರ	ಕೆಲಸ ಮಾಡುತ್ತಿರುವ ಇಲಾಖೆ
1986		
1. ಡಾ.ಸಿದ್ದಲಿಂಗಯ್ಯ	ಸಾಹಿತ್ಯ	ಬೆಂಗಳೂರು ವಿಶ್ವವಿದ್ಯಾನಿಲಯ
1987		
1. ಶ್ರೀ ದೇವನೂರ್ ಮಹದೇವ್	ಸಾಹಿತ್ಯ	ಮೈಸೂರು ವಿಶ್ವವಿದ್ಯಾನಿಲಯ
2. ಡಾ.ಜಿ.ಶಂ.ಪರಮಶಿವಯ್ಯ	ಜಾನಪದ ಸಾಹಿತ್ಯ	
3. ಶ್ರೀ ಎನ್.ಜಿ.ಬಾಳೆಕುಂದ್ರಿ,(ನಿವೃತ್ತಿ)	ಇಂಜಿನಿಯರಿಂಗ್	ಲೋಕೋಪಯೋಗಿ ಇಲಾಖೆ(ನಿವೃತ್ತಿ)
4. ಡಾ.ಬಿ.ಹನುಮಯ್ಯ	ವೈದ್ಯಕೀಯ	ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ
5. ಡಾ.ಡಿ.ಬಿ.ಬೆನಕಪ್ಪ	ವೈದ್ಯಕೀಯ	
6. ಡಾ.ಎಚ್.ಎಸ್.ನಾರಾಯಣನ್	ವೈದ್ಯಕೀಯ	
7. ಶ್ರೀ ಎನ್.ಲಕ್ಷ್ಮಣರಾವ್(ನಿವೃತ್ತಿ)	ಆಡಳಿತ	ಬೆಂಗಳೂರು ಮಹಾನಗರ ಪಾಲಿಕೆ
8. ಶ್ರೀ ಟಿ.ಆರ್.ಸತೀಶ್ ಚಂದ್ರನ್	ಆಡಳಿತ	ಸರ್ಕಾರದ ಮುಖ್ಯ ಕಾರ್ಯದರ್ಶಿ (ನಿವೃತ್ತಿ)
1988		
1. ಡಾ.ಚಂದ್ರಶೇಖರ್ ಕಂಬಾರ್	ನಾಟಕ	ಬೆಂಗಳೂರು ವಿಶ್ವವಿದ್ಯಾನಿಲಯ
2. ಡಾ.ಹೆಚ್.ಎಲ್.ನಾಗೇಗೌಡ(ನಿವೃತ್ತಿ)	ಜಾನಪದ	ಕಾರ್ಮಿಕ ಇಲಾಖೆ (ನಿವೃತ್ತಿ)
3. ಡಾ.ಜಿ.ವಿ.ಕೆ.ರಾವ್	ಆಡಳಿತ	ಸರ್ಕಾರದ ಮುಖ್ಯ ಕಾರ್ಯದರ್ಶಿ
4. ಡಾ.ಎಸ್.ವೀ.ಪಾಟೀಲ್	ಕೃಷಿ	ಕೃಷಿ ವಿಶ್ವವಿದ್ಯಾನಿಲಯ
5. ಡಾ.ಪಿ.ಸೆಲ್ವಿದಾಸ್	ಶಿಕ್ಷಣ	ಕಾಲೇಜು ಶಿಕ್ಷಣ ಇಲಾಖೆ
6. ಶ್ರೀ ಡಿ.ಮರಿಯಪ್ಪ	ಶಿಕ್ಷಣ	ಶಿಕ್ಷಣ ಇಲಾಖೆ
7. ಶ್ರೀ ಅರವಿಂದ ಹೆಗಡೆ (ಮರಣೋತ್ತರ)	ಅರಣ್ಯ ರಕ್ಷಣೆ	ಅರಣ್ಯ ಇಲಾಖೆ (ದಿವಂಗತ)
1989		
1. ಪ್ರೋ.ಚೆನ್ನವೀರ ಕಣವಿ.	ಸಾಹಿತ್ಯ	ಕರ್ನಾಟಕ ವಿಶ್ವವಿದ್ಯಾನಿಲಯ
2. ಶ್ರೀ ಪಿ.ಜೆ.ಫೆರ್ನಾಡಿಸ್	ಆಡಳಿತ	ಗೃಹ ಇಲಾಖೆ (ನಿವೃತ್ತಿ)
3. ಡಾ.ಎಂ.ಎಂ.ಜೋಶಿ	ವೈದ್ಯಕೀಯ	ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ
4. ಡಾ.ಚಾಮರಾಜ	ವೈದ್ಯಕೀಯ	
1990		
1. ಶ್ರೀ ಮಳಲಿ ವಸಂತಕುಮಾರ್	ಸಾಹಿತ್ಯ	ಮೈಸೂರು ಯುವರಾಜ ಕಾಲೇಜು
2. ಡಾ.ಜಿ.ಎಂ.ಜಯರಾಂ	ವೈದ್ಯಕೀಯ	ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ
3. ಡಾ.ಎಂ.ಗುರಪ್ಪ	ವೈದ್ಯಕೀಯ	

1991

1. ಶ್ರೀ ಕೆ.ಶಿವರಾಮ್ ಕನ್ನಡ ಐ.ಎ.ಎಸ್ ಬೆಂಗಳೂರು ಮಹಾನಗರ ಪಾಲಿಕೆ
2. ಶ್ರೀ ಎಂ.ಆರ್.ಕಾಂಬ್ಳೆ ಕನ್ನಡ ಐ.ಎ.ಎಸ್ ಸಿಬ್ಬಂದಿ, ಆಡಳಿತ ಸುಧಾರಣೆ ಇಲಾಖೆ
3. ಶ್ರೀ ವಿಜಯ ಸಾಸನೂರ್ ಕನ್ನಡ ಐ.ಪಿ.ಎಸ್ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ 25ನೆಯ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೀದರ್ ಜಿಲ್ಲೆಗೆ ವಾಯುದೂತ್ ಸೌಕರ್ಯ.

(998) ಶ್ರೀ ಬಸವರಾಜ ಪಾಟೀಲ ಅಟ್ಟೂರು (ಬಸವಕಲ್ಯಾಣ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಬೀದರ್ ಜಿಲ್ಲೆಗೆ ವಾಯುದೂತ ಸೌಕರ್ಯ ಕಲ್ಪಿಸುವ ಉದ್ದೇಶ ಸರ್ಕಾರಕ್ಕಿದೆಯೇ.

ಆ ಇದ್ದಲ್ಲಿ ಎಂದಿನಿಂದ ಕಲ್ಪಿಸಲಾಗುವುದು ?

ಶ್ರೀ ಜಿ.ಹೆಚ್.ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):-

ಅ ಇಲ್ಲ.

ಆ ಉದ್ಭವಿಸುವುದಿಲ್ಲ.

ಬೆಳಗಾವಿ ಜಿಲ್ಲೆಯ ಹರಿನಾಲ ನೀರಾವರಿ ಯೋಜನೆ.

(1378)ಶ್ರೀ ಶಿವಾನಂದ.ಹೆಚ್.ಕೌಜಲಗಿ (ಬೈಲಹೊಂಗಲ):- ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಬೆಳಗಾವಿ ಜಿಲ್ಲೆಯ ಕರಿನಾಲಾ ನೀರಾವರಿಯೋಜನೆಗೆ ಮಂಜೂರಾತಿಯನ್ನು ಎಂದಿನಿಂದ ನೀಡಲಾಯಿತು?

ಆ ಈ ಯೋಜನೆಗಾಗಿ ಖರ್ಚು ಮಾಡಿದ ಹಣವೆಷ್ಟು ಹಾಗೂ ಮಂಜೂರಾದ ಹಣವೆಷ್ಟು?

ಇ ಈ ಯೋಜನೆಯಿಂದ ಎಷ್ಟು ಕ್ಷೇತ್ರಕ್ಕೆ ನೀರಾವರಿ ಆಗುವುದು ಮತ್ತು ಯಾವ ಯಾವ ಗ್ರಾಮದವರಿಗೆ ಈ ಯೋಜನೆಯಫಲ ದೊರೆಯುವುದು(ವಿವರವನ್ನೊದಗಿಸುವುದು)?

ಶ್ರೀ ಮಲ್ಲಾರಿಗೌಡ.ಎಸ್.ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):-

ಅ 16-8-1960ರಲ್ಲಿ 83 ಲಕ್ಷ ವೆಚ್ಚದ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ ಇದುವರೆಗೆ ಮಾಡಿದ ವೆಚ್ಚ 7.45 ಲಕ್ಷ ರೂ.ಗಳು ಮಂಜೂರಾದ ಹಣ 83 ಲಕ್ಷ ರೂ.ಗಳು.

ಇ 13 ಗ್ರಾಮಗಳಲ್ಲಿನ 11,350 ಎಕರೆಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿತ್ತು. ಆದರೆ ಸಾಗುವಳಿ ಆಗುತ್ತಿರುವ ಭೂಮಿಯ ಮುಳುಗಡೆಯಾಗುವ ಹಿನ್ನೆಲೆಯಲ್ಲಿ ಬದಲಿ ಯೋಜನೆಗಳನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಬೈಲಹೊಂಗಲ ಬೈಲವಾಡಿ ನೀರಾವರಿ ಕೆರೆಗೆ ಈಗಿರುವ ನೀರಿನ ಸಾಮರ್ಥ್ಯವನ್ನು ಹೆಚ್ಚಿಸುವುದು.

(2349)ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ):- ಮಾನ್ಯ ಸಣ್ಣ ನೀರಾವರಿ